ಓ ಎಸ್ ನಂ: 1/2023
ಪಿ. ಡಬ್ಲ್ಯೂ-2

**(ಇಂದು ದಿನಾಂಕ 07-01-2026 ರಂದು ಮಧ್ಯಂತರ ಅರ್ಜಿ ನಂ: 18 ಮತ್ತು 19 ರ ಆದೇಶದನ್ವಯ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲು: ಪ್ರತಿವಾದಿ ನಂ: 3 ರವರ ಪರ ಶ್ರೀ ಪಿ ಡಿ ಕೆ ವಕೀಲರಿಂದ**

ನಾನು ಮೂಲತಃ ಧಾರವಾಡ ಶಹರ ವಾಸಿ ಇರುತ್ತೇನೆ . ವಾದಿ ಮತ್ತು ಪ್ರತಿವಾದಿಯರು ನನಗೆ ಕಳೆದ 25-30 ವರ್ಷಗಳಿಂದ ಪರಿಚಿತರು . ಅವರು ನನ್ನ ಸಂಬಂಧಿಕರಲ್ಲ . ವಾದಿಯು ನನ್ನ ಸಹಪಾಠಿ ಜೊತೆಗೆ ಓದಿದವರು . ಕಮಲವ್ವ ಬಾಳಗಿ ಇವರ ಪರಿಚಯ ಇದೆ . ಕಮಲವ್ವ ಬಾಳಗಿ ಇವರು ವಾದಿಯ ದೊಡ್ಡಮ್ಮ ಇರುತ್ತಾರೆ . ಕಮಲವ್ವ ಬಾಳಗಿ ಇವರನ್ನು ವಾದಿಯ ಮನೆಯಲ್ಲಿ ನೋಡಿದ್ದೇನೆ . ಸದರಿ ಕಮಲವ್ವ ಬಾಳಗಿ ಇವರನ್ನು ಸಾಯುವ 15 ದಿನ ಮೊದಲು ನೋಡಿದ್ದೇನೆ.

ಸದರಿ ಕಮಲವ್ವ ಬಾಳಗಿ ಇವರು ತನ್ನ ತವರು ಮನೆಯ ಆಸ್ತಿಯಲ್ಲಿ ಹಿಸ್ಸೆ ಕೊರಿ ದಾವೆ ದಾಖಲಿಸಿರುವ ಕುರಿತು ನನಗೆ ಮಾಹಿತಿ ಇಲ್ಲ . ನಿಪಿ-1 ನ್ನು ಬರೆ ಯುವ ಸಮಯದಲ್ಲಿ ನನ್ನನ್ನು ಕಮಲವ್ವ ಬಾಳಗಿ ಇವರು ದಿ: 21.01.2019 ರಂದು ಕರೆದರು ಸಾಕ್ಷಿಯು ಮುಂದುವರೆದು ದಿ: 31.01.1019 ರಂದು ಮೃತ್ಯು ಪತ್ರ ಮಾಡಿದ್ದಾರೆ ಎಂದು ಹೇಳುತ್ತಾರೆ . ಕಮಲವ್ವ ಬಾಳಗಿ ಇವರು ದಿ: 21.01.2019 ರಂದು ನನ್ನನ್ನು ಕೋರ್ಟಿಗೆ ಕರೆದರು . ಆದರೆ ಮನೆಗೆ ಕರೆದಿಲ್ಲ .

ಓ ಎಸ್ ನಂ: 1/2023
ಪಿ. ಡಬ್ಲ್ಯೂ-2

ನನ್ನನ್ನು ಕರೆದಾಗ ಬೆ: 11-11.30 ಆಗಿರಬಹುದು . ವಾದಿಯ ಹೆಸರಿಗೆ ಮೃತ್ಯು ಪತ್ರ ಮಾಡುವುದು ಇದೆ ಎಂದು ನನಗೆ ಹೇಳಿದರು . ನಾನು , ಕಮಲವ್ವ ಬಾಳಗಿ , ಕಮಲವ್ವ ಇವರ ಮೂರು ಜನ ಮಕ್ಕಳು , ಕಮಲವ್ವ ಬಾಳಗಿ ಇವರ ಮೊಮ್ಮಗ ವಿಜಯಕುಮಾರ ಇದ್ದೆವು . ಕಮಲವ್ವ ಬಾಳಗಿ ಇವರ ಮಕ್ಕಳು ಹೆಸರು ಚಂದ್ರಾವತಿ , ಮಲ್ಲಿಕಾರ್ಜುನ ಮತ್ತು ಕಮಲವ್ವ ಬಾಳಗಿ ಇವರ ದೊಡ್ಡ ಮಗಳು ಅವರು ಇದ್ದರು . ನಾವೆಲ್ಲರೂ ಒಂದೇ ರಿಕ್ಷಾದಲ್ಲಿ ಕೋರ್ಟಿಗೆ ಹೋಗಿದ್ದೆವು . ನಿಪಿ-1 ನ್ನು ಬರೆಯಲು ಕಮಲವ್ವ ಬಾಳಗಿ ಇವರು ಮಾಹಿತಿ ಕೊಟ್ಟರು . ಕಮಲವ್ವ ಬಾಳಗಿ ಇವರು ಮೌಖಿಕವಾಗಿ ನೀಡಿದ ಮಾಹಿತಿಯನ್ನು ಕಾಮತ್ ವಕೀಲರು ಬರೆದರು . ಹಾಗೇ ಬರೆದ ದಾಖಲೆಗೆ ವಕೀಲರು ಸಹಿ ಪಡೆದಿದ್ದಾರೆ . ಹಾಗೇ ಬರೆದ ದಾಖಲೆಗೆ ನಾನು ಸಹಿ ಮಾಡಿದ್ದೆನೋ ಇಲ್ಲವೋ ಗೊತ್ತಿಲ್ಲ . ದಾವಾ ಆಸ್ತಿಯ ಉತಾರ ವಗೈರೆ ದಾಖಲೆಗಳನ್ನು ನಾನು ನೋಡಲಿಲ್ಲ . ಯಾವ ಆಸ್ತಿಯ ಕುರಿತು ಮತ್ತು ಯಾವ ಕಾರಣಕ್ಕಾಗಿ ಮೃತ್ಯು ಪತ್ರ ಮಾಡುತ್ತಿದ್ದಿರಿ ಎಂದು ಕಮಲವ್ವ ಬಾಳಗಿ ಇವರನ್ನು ನಾನು ಕೇಳಲಿಲ್ಲ . ನಿಪಿ-1 ನ್ನು ನೊಂದಣಿ ಮಾಡಿಸುವ ಕಾಲಕ್ಕೆ ನಾನು ಉಪನೊಂದಣಾಧಿಕಾರಿಗಳ ಕಚೇರಿಗೆ ಹೋಗಿದ್ದೆ ಆದರೆ ನೊಂದಣಿ ಮಾಡುವ ಕಾಲಕ್ಕೆ ನಾನು ಒಳಗೆ ಹೋಗಿರಲಿಲ್ಲ . ಯಾವ ದಾಖಲೆಯನ್ನು ನೊಂದಣಿ ಮಾಡಿಸಿದ್ದಾರೆ ಅದು ಬರೆದಿದ್ದರೋ ಅಥವಾ ಮುದ್ರಿಸಿದ್ದಾರೋ ಎನ್ನುವ ಕುರಿತು ನನಗೆ ಮಾಹಿತಿ ಇಲ್ಲ . ಕಮಲವ್ವ ಬಾಳಗಿ ಇವರು 2020 ರಲ್ಲಿ ಮರಣ ಹೊಂದರು ಆದರೆ ಅವರ ಮರಣ ಹೊಂದಿದ ದಿನಾಂಕ ನಿಕರವಾಗಿ ನೆನಪಿಲ್ಲ .

ಓ ಎಸ್ ನಂಃ 1/2023
ಪಿ. ಡಬ್ಲ್ಯೂ-2

ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರ ತಯಾರಿಸಲು ಕಮಲವ್ವ ಬಾಳಗಿ ಇವರು ಮಾಹಿತಿ ಕೊಟ್ಟಿದ್ದಾರೆ . ನಿಪಿ-1 ರ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯ ನನ್ನ ಗೆಳೆಯನಾಗಿರುವ ಕಾರಣ ಅವನಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಕಮಲವ್ವ ಬಾಳಗಿ ಇವರಿಗೆ ಪ್ರಕಾಶ ಎನ್ನುವ ಮಗ ಇದ್ದು ಅವನಿಗೆ ಹೆಂಡತಿ ಮಕ್ಕಳು ಇದ್ದಾರೆ ಎಂದರೆ ಸರಿ . ಸದರಿ ಆಸ್ತಿಯಲ್ಲಿ ಕಮಲವ್ವ ಇವರಿಗೆ ಎಷ್ಟು ಹಿಸ್ಸೆ ಇದೆ ಎನ್ನುವ ಕುರಿತು ನನಗೆ ಮಾಹಿತಿ ಇಲ್ಲ . ನಿಪಿ-1 ನ್ನು ಬರೆಯುವ ಕಾಲಕ್ಕೆ ಕಮಲವ್ವ ಬಾಳಗಿ ಇವರ ಮಕ್ಕಳು ಇದ್ದರು ಮತ್ತು ಅವರು ಸಹಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಮತ್ತು ವಾದಿ ಸೇರಿ ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ನಿಪಿ-1 ಕಮಲವ್ವ ಬಾಳಗಿ ಕಡೆ ಇತ್ತು .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.